ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ವಾದಿ ಪರ ಶ್ರೀ ಎ.ಎಸ್.ಎಸ್. ವಕೀಲರಿಂದಃ-

ದಾವಾ ಆಸ್ತಿಗಳನ್ನು ಹೊರತುಪಡಿಸಿ ಬೇರೆ ಯಾವುದೇ ಆಸ್ತಿಗಳು ಇರುವುದಿಲ್ಲ ಎಂದರೆ ಸರಿ. ಪ್ರತಿವಾದಿ 1 ರಿಂದ 4 ರವರ ಲಿಖಿತ ಹೇಳಿಕೆಯ ಕಂಡಿಕೆ 6 ರಲ್ಲಿ ಹೇಳಿರುವಂತೆ ವಾದಿರವರ ತಂದೆಯಾದ ನಮ್ಮ ದೊಡ್ಡಪ್ಪನವರು ಬೆಂಗಳೂರಿನಲ್ಲಿ ನಿವೇಶನವನ್ನು ಖರೀದಿಸಿ 3 ಅಂತಸ್ತಿನ ಮನೆಯನ್ನು ನಿರ್ಮಿಸುತ್ತಾರೆ ಎಂದು ಬರೆಸಿರುತ್ತೇವೆ ಎಂದರೆ ಸಾಕ್ಷಿ ನಮ್ಮ ತಂದೆಯವರು ನನಗೆ ತಿಳಿಸಿರುತ್ತಾರೆ ಅದರಂತೆ ನಾನು ಹೇಳಿ ಬರೆಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ನೋಡಿರುತ್ತೀರಾ ಮತ್ತು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿ ದಾಖಲೆಗಳನು ನೋಡಿರುವುದಿಲ್ಲ ಆದರೆ ಫೋಟೋ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಹೇಳುವಂತೆ ನನ್ನ ದೊಡ್ಡಪ್ಪನವರು ಯಾವುದೇ ನಿವೇಶನ ಖರೀದಿಸಿರುವುದಿಲ್ಲ ಮತ್ತು 3 ಅಂತಸ್ತಿನ ಮನೆ ಕಟ್ಟಿಸಿರುವುದಿಲ್ಲ ಎಂದರೆ ಸಾಕ್ಷಿಯು ನಮ್ಮ ತಂದೆಯವರು ಹೇಳಿರುವಂತೆ ಅವರ ನಿವೇಶನ ಖರೀದಿಸಿ 3 ಅಂತಸ್ತಿನ ಮನೆಯನ್ನು ಕಟ್ಟಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಮನೆಗೆ ಸಂಬಂಧಿಸಿದಂತೆ ದಾಖಲೆಗಳನ್ನು ತೆಗೆಸಲು ನಿಮಗೆ ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸಾಕ್ಷಿ ನಾನು ಹೋಗಿ ತೆಗೆದುಕೊಂಡಿರುವುದಿಲ್ಲ.

1983 ರಲ್ಲಿ ನಮ್ಮ ದೊಡ್ಡಪ್ಪನವರು ಮಹದೇವಯ್ಯನವರು ತೀರಿಕೊಂಡಿರುತ್ತಾರೆ ಮತ್ತು ಅವರ ಅಂತ್ಯ ಕ್ರಿಯೆಯಲ್ಲಿ ನಮ್ಮ ಊರಿನ

ದಾವಾ ಆಸ್ತಿಯಲ್ಲಿ ನೆರವೇರಿಸಲಾಗಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ನಮ್ಮ ದೊಡ್ಡಪ್ಪನ ಹೆಂಡತಿಯ ಜಯಕುಮಾರಿರವರು 1992 ರಲ್ಲಿ ತೀರಿಕೊಂಡಿದ್ದು ಅವರ ಅಂತ್ಯಕ್ರಿಯೆಯನ್ನು ದಾವಾ ಆಸ್ತಿಯಲ್ಲಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ.

ಸಾಕ್ಷಿಗೆ ದಿನಾಂಕ 11.12.2009 ರಂದು ಆದ ನೋಂದಾಯಿತ ಕ್ರಯ ಪತ್ರದ ದೃಢೀಕೃತ ನಕಲನ್ನು ತೋರಿಸಿ 3 ನೇ ವಾದಿರವರು ವರದರಾಜು ರವರ ಕಡೆಯಿಂದ ಸ್ವಯಾರ್ಜಿತವಾಗಿ 3 ಅಂತಸ್ತಿನ ಮನೆಯನ್ನು ಅಂದರೆ ನಿಡಿ-35 ರಲ್ಲಿ ಕಾಣುವ ಮನೆಯನ್ನು ಖರೀದಿಸಿರುತ್ತಾರೆ ಎಂದರೆ ಸಾಕ್ಷಿ ನೋಡಿ ಹೌದು ಎಂದು ಒಪ್ಪಿಕೊಂಡ ಕಾರಣ ಸದರಿ ದಾಖಲೆಯನ್ನು ನಿಪಿ-17 ಎಂದು ಗುರುತಿಸಲಾಯಿತು. ನಿಪಿ-13 ರಂತೆ ನಿಮ್ಮ ತಾತನವರು ಸರ್ಕಾರಕ್ಕೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ನಿಪಿ-5 ರಿಂದ ನಿಪಿ-7 ರ ಪಹಣಿ ಪತ್ರಿಕೆಯ ಕಲಂ 12 ರಲ್ಲಿ ನಮ್ಮ ತಾತನನವರು ಹೆಸರು ಬರುತ್ತಿರುತ್ತದೆ ಎಂದರೆ ಸಾಕ್ಷಿಯು ನಮ್ಮ ತಾತ ಮತ್ತು ನಮ್ಮ ತಂದೆ ಇಬ್ಬರು ವ್ಯವಸಾಯ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ನಿಪಿ-17 ರಂತೆ 2 ನೇ ವಾದಿರವರು ತಮ್ಮ ಸರ್ಕಾರಿ ನೌಕರಾಗಿದ್ದು ಸಾಲ ಪಡೆದುಕೊಂಡ ಖರೀದಿಸಿರುತ್ತಾರೆ ಎಂದರೆ ಸಾಕ್ಷಿಯು ಅವರ ತಂದೆಯ ಕಡೆಯಿದ ಬಂದ ಹಣದಿಂದ ಖರೀದಿಸಿರುತ್ತಾರೆ ಎಂದು ನುಡಿಯುತ್ತಾರೆ. ನಮ್ಮ ದೊಡ್ಡಪ್ಪನವರು ವೈಯಕ್ತಿವಾಗಿ ಯಾವುದೇ ನಿವೇಶವನ್ನು ಖರೀದಿಸಿರುವುದಿಲ್ಲ ಎಂದರೆ ಸಾಕ್ಷಿ ಅವರು ಅವರು ಸಹ ಸರ್ಕಾರಿ ಕೆಲಸದಲ್ಲಿ ಇದ್ದು ನಿವೇಶನವನ್ನು ಖರೀದಿಸಿರುತ್ತಾರೆ ಎಂದು ನುಡಿಯುತ್ತಾರೆ. ನಮ್ಮ ದೊಡ್ಡಪ್ಪನವರು ಸರ್ಕಾರಿ ಕೆಲಸದಲ್ಲಿ ಇದ್ದು

ನಿವೇಶನವನ್ನು ಖರೀದಿಸಿದ ಬಗ್ಗೆ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಾನು ಮತ್ತು ಉಳಿದ ಪ್ರತಿವಾದಿಗಳು ವಾದಿಗಳಿಗೆ ಮೋಸ ಮಾಡುವ ಉದ್ದೇಶದಿಂದ ಓ.ಎಸ್ 128/2012 ರಂತೆ ದಾವೆ ಸಲ್ಲಿಸಿ ವಾದಿಗಳಿಗೆ ಗೊತ್ತಿಲ್ಲದಂತೆ ಡಿಕ್ರಿ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ತಂದೆಯವರು 2010 ರಲ್ಲಿ ತೀರಿಕೊಂಡಿರುತ್ತಾರೆ. ದಾವಾ ಐಟಂ-4 ರ ಮನೆಯಲ್ಲಿ ನಮ್ಮ ತಾತನವರು ಜೀವಂತ ಇದ್ದಾಗ ಅವರು ವಾಸವಿದ್ದು, ಅವರ ನಂತರ ಅವರ ವಾರಸುದಾರರು ಅನುಭವಿಸಿಕೊಂಡು ಮುಂದುವರೆಸಿಕೊಂಡು ಹೋಗಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ವಾದಿಗಳಿಗೆ ಅವರ ತಂದೆಯ ಭಾಗದಲ್ಲಿ ಸಮಾನವಾದ ಹಕ್ಕು ಇದ್ದು ಈಗ ನಾವು ಪ್ರತಿವಾದಿಗಳು ಅನುಭವಿಸಿಕೊಂಡು ಹೋಗಿರುತ್ತೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಮಹೇಶ್ ಬಿ.ಟಿ)
1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.